ಪರಿಚಯವಾದವರು. ಆದರೂ ಈ ಇಬ್ಬರೂ ಎಲ್ಲೋ ಹಲವು ಜನ್ಮಗಳಿಂದಲೂ ಹತ್ತಿರದ ಬಂಧುಗಳಂತೆಯೇ ಎಂಬ ಭಾವನೆ ಹುಟ್ಟಿಸಿದ್ದರು.

ದುಷ್ಯಂತರಾವ್ ಅಂತೂ ಬಹಳಷ್ಟು ಜೀವನೋತ್ಸಾಹ ತುಂಬಿದ ಮನುಷ್ಯ. ''ಹಾಂ, ಹುಂ... ಹೌದು... ಸತ್ಯ, ಓಹ್....'' ಇತ್ಯಾದಿ ಶಬ್ದಗಳನ್ನೆಲ್ಲ ತುಂಬಾ ನಾಟಕೀಯವಾಗಿ ಮಾತನಾಡುವವರು. ಓತಪ್ರೋತವಾಗಿ ಇಂಗ್ಲಿಷ್ ಲೇಖಕರು ಬರೆದ ಪುಸ್ತಕಗಳಲ್ಲಿನ ವಿಚಾರಗಳನ್ನು ಎತ್ತಿ ಒಂದು ಥಿಯೆಟ್ರಿಕಲ್ ಧ್ವನಿ ತೆರೆದು, ಹುಬ್ಬು, ಮುಖ, ಕಣ್ಣು ಕುಣಿಸುತ್ತ ಹೇಳಬಹುದಾದವರು. ಅದನ್ನು ಅವರು ಮಾಡಿದರೆ ಚಂದವಿರುತ್ತಿತ್ತೇ ವಿನಾ ಅನ್ಯರಿಂದ ಅನುಕರಿಸಲಾಗದ ಅವರದೇ ಛಾಪಿನಲ್ಲಿ ಇರುತ್ತಿತ್ತು. ಅವರಿಗೆ ಕನ್ನಡ ಸಿನಿಮಾಗಳ ಬಗ್ಗೆ ಆಸಕ್ತಿ ಇಲ್ಲವೆಂದಲ್ಲ. ಆದರೆ, ಇಂಗ್ಲಿಷ್ ಸಿನಿಮಾಗಳ ಬಗೆಗಿನ ಮೋಹ ಜಾಸ್ತಿ. ಇಂಗ್ಲಿಷ್ ಥಿಯೇಟರ್‌ಗಳಲ್ಲೂ ತನ್ನನ್ನು ಗುರುತಿಸಿಕೊಂಡವರು. ಹಾಗೆಯೇ ರೇಸ್ ಹುಚ್ಚು. ''ವಾಮನ್ ಹೋಗೋ ಹಣವನ್ನು ತಡೆಯಲಾಗದು. ಬರೋ ಹಣ ಬಾರದೇ ಇರದು'' ಎಂದು ಅನ್ನುತ್ತ ಕಿಸೆ ತುಂಬಿದ ಜೇಬು ತೋರಿಸುತ್ತಿದ್ದರು. ಹಣ ಹೋದಾಗ ಪ್ಯಾಂಟಿನ ಜೇಬು ತೋರಿಸುತ್ತಿದ್ದರು. ಕುಡಿದರೆ ರಾಯಲ್ ಚಾಲೆಂಜ್ ಕುಡಿಯಬೇಕು ಎಂಬ ಇರಾದೆ ಅವರದು. ಸ್ಕಾಚ್ ವಿಸ್ಕಿ ಕೂಡಾ ಇಷ್ಟವೇ. ವಾಮನ್, ''ಆರ್ ಸಿ ಈಸ್ ಆರ್ ಸಿ ಆಲವೇಸ್'' ಎಂದು ಡ್ರಿಂಕ್ ಗುಟುಕುಗಳನ್ನು ಚಪ್ಪರಿಸುತ್ತಿದ್ದರು. ಎಂದೂ ವೈಯಕ್ತಿಕ ಬದುಕಿನ ಬಗೆಗೆ ಹೇಳಿದವರಲ್ಲ.



''ಕಾಳಿಕಾ ರಿಲೇಟರ್ಸ್'' ಎಂಬ ರಿಯಲ್ ಎಸ್ಟೇಟ್ ಏಜೆನ್ಸಿ ನಡೆಸುತ್ತಿದ್ದ ಮದನ್ ಬಾಬುವನ್ನು ವಾಮನ, ಕೆಲವು ಕಟ್ಟಡ ನಿರ್ಮಾಣಗಳ ಬಗೆಗಾಗಿ ಸಂಪರ್ಕಿಸುತ್ತಿದ್ದಾಗ ದುಷ್ಯಂತರಾವ್ ಪರಿಚಯ ಆದವರು. ಈ ಪರಿಚಯವೇ ಸ್ನೇಹದ ಬಾಂಧವ್ಯಕ್ಕೆ ದಟ್ಟವಾಗಿ ಬೆಳೆದುಕೊಂಡಿತ್ತು. ಮದನ್‌ಬಾಬು ಕಲ್ಕತ್ತಾ ಮೂಲದ, ದೊಡ್ಡ ರಿಯಲ್ ಎಸ್ಟೇಟ್ ವಹಿವಾಟುಗಳ ಕುಳ. ಬಹು ದೊಡ್ಡ ವಹಿವಾಟು ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಚೆನ್ನಾಗಿ ತುಂಬಿಕೊಂಡಿತ್ತು. ಪ್ರಾರಂಭದಲ್ಲಿ ಬಾಬು ಬಿಗಿಯಾಗಿಯೇ ಇದ್ದ. ಆದರೆ, ದುಷ್ಯಂತರಾವ್ ಬಿಗಿಯನ್ನು ಕಳಚಿಸಿ ಮದನ್‌ಬಾಬು ಲೆಕ್ಕದ ಒಟ್ಟು ಹದಿನೆಂಟು ಕಟ್ಟಡಗಳ ನಿರ್ಮಾಣ ಜವಾಬ್ದಾರಿಗಳೆಲ್ಲ ವಾಮನನಿಗೆ ಸಂದಾಯಗೊಳ್ಳುವಂತೆ ಮಾಡಿದ್ದರು.

ಇದರಿಂದಾಗಿ ವಾಮನ ಮತ್ತು ದುಷ್ಯಂತರಾವ್ ಬಹಳಷ್ಟು ಹತ್ತಿರವಾಗಿದ್ದರು. ವಾಮನನಿಗೆ ಇದರಲ್ಲಿ ದೊಡ್ಡ ಲಾಭವೇ ಆಗಿತ್ತು. ದುಷ್ಯಂತರಾವ್‌ಗೆ ಏನೋ ಒಂದು ಪಾಲು ಕೊಡುವ ಯೋಚನೆಯನ್ನು ವಾಮನ ತಳೆದಿದ್ದರೂ ದುಷ್ಯಂತರಾವ್ ಅದನ್ನು ನಿರಾಕರಿಸಿದ್ದರು. ''ಇಂದು ಹೋಗಿ ಬರೋಣವೆ'' ಎಂದು ತೆಳ್ಳಗೆ ನಗುತ್ತ ವಾಮನನನ್ನು ಫೋನ್‌ನಲ್ಲಿ ಕೇಳುತ್ತಿದ್ದರು. ಇಂದು ಹೋಗಿ ಬರೋಣವೇ ಎಂದು ದುಷ್ಯಂತರಾವ್ ಫೋನಿನಲ್ಲಿ ಕೇಳುತ್ತಿದ್ದಾರೆ ಎಂದು ಅಂದರೆ, ಕ್ಲಬ್‌ಗೆ ನಾವಿಬ್ಬರು ಹೋಗಿಬರೋಣವೇ ಎಂದು ಅರ್ಥ ಇರುತ್ತಿತ್ತು. ರೇಸ್‌ಕೋರ್ಸ್ ರೋಡ್ ಸನಿಹದ ಒಂದು ಕ್ಲಬ್‌ನಲ್ಲಿ ಅವರು ಕೂಡ ಒಬ್ಬ ಮೆಂಬರ್. ಎಂದೂ ಬಿಲ್ ಅನ್ನು ವಾಮನ್ ತೆರಲು ಬಿಟ್ಟವರಲ್ಲ. ಒಂದೋ, ಎರಡೋ ನೂರು ರೂಪಾಯಿ ಜರೂರು ಬಿದ್ದರೆ ಅಪರೂಪಕ್ಕೆ ಕೇಳುತ್ತಿದ್ದರು. ಲೆಮನ್ ಜ್ಯೂಸ್‌ಗೆ ಹಲವು ವಿಧದಲ್ಲಿ ಬೆರೆತ ಹಣ್ಣಿನ ರಸವನ್ನು ಕೊಡಿಸುತ್ತಿದ್ದರು. ಬೋಂಡಾ, ಮೊಸರು ಕೋಡುಬಳೆ, ಮಸಾಲಾ ಬೆರೆಸಿ ಈರುಳ್ಳಿ ಮತ್ತು ಕೊಬ್ಬರಿ ತುರಿಯಲ್ಲಿ, ಟೊಮೆಟೊ ತುಂಡುಗಳಲ್ಲಿ ಉರುಳಾಡಿಕೊಂಡ ಕಡಲೆ ಬೀಜಗಳು ಇತ್ಯಾದಿ ಇತ್ಯಾದಿ ಸೊಗಸು ಬೇರೆಯದೇ ಇರುತ್ತಿತ್ತು. ಕ್ಲಬ್‌ನಲ್ಲಿ ದುಷ್ಯಂತರಾವ್ ಪಾರಜದಂತೆ ವಯಸ್ಸಿಗೂ ಮೀರಿದ

